ship of the Legislative Assembly. I have accepted the resigationrn

Calling Attention to matters of urgent Public importance

(i) *re : Strike by the employees of the Karnataka Government*

ಶ್ರೀ ಮಳ್ಳೂರು ಆನಂದ ರಾವ್ (ರಾಜಾಜಿನಗರ) :—ಮಾನ್ಯ ಅಧ್ಯಕ್ಷರೆ, ಸರ್ಕಾರಿ ನೌಕರರ ಸತ್ಯಾಗ್ರಹ ಮತ್ತು ಅದರಿಂದ ಉದ್ಭವವಾಗಿರತಕ್ಕ ಪರಿಸ್ಥಿತಿ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

SRI D. DEVARAJ URS (Chief Minister):-I am making the following Statement.

The new pay scales introduced by the State Government from 1st January 1977 are by for the most progressive scales in the country with attractive annual increments. The State Government have always done their best to improve the service conditions of their employees.

Representations had been received for grant of two more instalments of dearness allowance. The State Government have already announced grant of one more instalment of dearness allowance with effect from 1st Febsuary 1979. The Government of India have not yet issued orders regarding sanction of another instalment of dearness allowance (due at 328 points) to their employees.

There is no commitment as of today, on the part of the State Government to sanction dearness allowance according to a set formula Therefore, the question of instalments of dearness allowance being 'due' does not arise. However, as already announced, the demands of the Employees' Association would be discussed with their representatives after the Budget Session is over.

ಶ್ರೀ ಮಳ್ಳೂರ್ ಆನಂದರಾವ್.—ಸ್ವಾಮಿ, ಈ ಬಗ್ಗೆ ನನಗೆ ಎರಡು ಮೂರು ವಿಷಯಗಳ ಬಗ್ಗೆ ವಿವರಣೆಗಳು ಬೇಕಾಗಿವೆ. ೧೯೭೭ರಲ್ಲಿ ನಾರಾಯಣ ಪೈ ಪೇ ಕಮಿಷನ್ ವರದಿ ಬಂದಾಗ ಆಗ ಅರ್ಥ ಸಚಿವರಾಗಿದ್ದ ಮಾನ್ಯ ಎಂ. ವೈ. ಘೋರ್ಪಡೆಯವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಮತ್ತು ಇದರಲ್ಲಿ ಒಂದು ಮಾರಲ್ ಅಂಡರ್‌ಸ್ಟ್ಯಾಂಡಿಂಗ್ ಮತ್ತು ಮಾರಲ್ ಬೈಂಡಿಂಗ್ ಇದೆ. ಏನೆಂದರೆ ಕೇಂದ್ರ ಸರ್ಕಾರದ ತುಟ್ಟಿಭತ್ಯಕ್ಕೆ ಸಮಾನವಾಗಿ ರಾಜ್ಯ ಸರ್ಕಾರೀ ನೌಕರರಿಗೆ ತುಟ್ಟಿಭತ್ಯವನ್ನು ಕೊಡುತ್ತೇವೆಂಬ ಆಧಾರದ ಮೇಲೆ ಒಂದು ರೀತಿಯ ಒಪ್ಪಂದವಾಗಿದೆ. ಎರಡನೆಯದಾಗಿ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಹೇಳಿಕೆಯಲ್ಲಿ The Government of India have not yet issued orders regarding sanction of another instalment of dearness allowance (due at 328 points) to their employees—ಎಂದು ಹೇಳಿದ್ದಾರೆ. ಆದರೆ ನಾನು ನನಗೆ ಗೊತ್ತಿರತಕ್ಕಂಥ ಮಾಹಿತಿ ಪ್ರಕಾರ ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರಲಿಚ್ಛಿಸುವುದೇನೆಂದರೆ ಕೇಂದ್ರ ಸರ್ಕಾರ ತನ್ನ ನೌಕರರಿಗೆ ೫ ಕಂತಿನ ತುಟ್ಟಿಭತ್ಯವನ್ನು ಬಿಡುಗಡೆ ಮಾಡಿದೆ, ಆದರೆ ಮುಖ್ಯ ಮಂತ್ರಿಗಳು ತಮ್ಮ ಹೇಳಿಕೆಯಲ್ಲಿ ಈ ಬಗ್ಗೆ ಉಲ್ಲೇಖ ಮಾಡಿಲ್ಲ. ಈಗಾಗಲೇ ಕೇಂದ್ರ ಸರ್ಕಾರದ ನೌಕರರಿಗೆ ಕೇಂದ್ರ ಸರ್ಕಾರ ೫ ಕಂತುಗಳ ತುಟ್ಟಿಭತ್ಯವನ್ನು ಮಂಜೂರು ಮಾಡಿದೆ. ೧೯೭೭ರಲ್ಲಿ ಹೊಸ ವೇತನ ಶ್ರೇಣಿ ಜಾರಿಗೆ ಬಂದ ಸಂದರ್ಭದಲ್ಲಿ ಹೇಳಿದ್ದ ಪ್ರಕಾರ ಮೊದಲನೇ ಕಂತಿನ ತುಟ್ಟಿಭತ್ಯವನ್ನು ರಾಜ್ಯ ಸರ್ಕಾರೀ ನೌಕರರು ಚಳುವಳಿ ಮಾಡಿದ ಮೇಲೆ, ಸಂಪು ಹೂಡಿದಮೇಲೆ ಬಹಳ ಹಿಂದೆಯೇ ನೀಡಬೇಕಾಗಿದ್ದ ಆ ತುಟ್ಟಿಭತ್ಯವನ್ನು ಸರ್ಕಾರ ಈಗ ಮಂಜೂರು ಮಾಡಿದೆ. ತಾವೇ

ತಾವಾಗಿ ಕೊಡಬೇಕಾಗಿದ್ದ ಒಂದು ಕಂತು ತುಟ್ಟಿಭತ್ಯವನ್ನು ಸರ್ಕಾರೀ ನೌಕರರು ಸಂಪು ಹೂಡಿ ಸತ್ಯಾಗ್ರಹ ಮಾಡಿದಮೇಲೆ ಮಾನ್ಯ ಅರ್ಥಸಚಿವರು ಮಂಜೂರು ಮಾಡಿದ್ದಾರೆ. ರಾಜ್ಯ ಸರ್ಕಾರೀ ನೌಕರರ ಸಂಘದವರು ಬೇಡಿಕೆಗಳ ದೊಡ್ಡ ಪಟ್ಟಿಯನ್ನೇ ಇಲ್ಲಿ ಕೊಟ್ಟಿದ್ದಾರೆ. ಆದರೆ ನಾನು ಎಲ್ಲದರ ಬಗ್ಗೆ ಈಗ ಪ್ರಸ್ತಾಪ ಮಾಡುವುದಿಲ್ಲ. ಈಗ ಸರ್ಕಾರದವರು ಕೊಟ್ಟಿರತಕ್ಕ ಒಂದು ಕಂತು ತುಟ್ಟಿಭತ್ಯ ಏನಿದೆ ಇದು ಹಳೇ ಬಾಕಿಯೇ ಹೊರತು ಹೊಸದೇನಲ್ಲ, ಆದರೆ ಇನ್ನೊಂದು ಕಂತು ತುಟ್ಟಿಭತ್ಯ ಕೊಡಬೇಕೆಂದು ಸರ್ಕಾರೀ ನೌಕರರು ಏನುಕೇಳುತ್ತಿದ್ದಾರೋ ಅದನ್ನು ದಯಮಿಟ್ಟು ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು ಕೊಡಬೇಕಾದ ಬಾಕಿ ತುಟ್ಟಿಭತ್ಯದ ಪ್ರಶ್ನೆ ಉದ್ಭವಿಸುವುದಿಲ್ಲ ಎಂಬ ಮಾತನ್ನು ತಾವೇ ಹೇಳಿದ್ದೀರಿ. ಒಂದು ದೃಷ್ಟಿಯಿಂದ ಬರವಣಿಗೆಯಲ್ಲಿ ಬರೆದುಕೊಡದಿದ್ದರೂ ಕೂಡ ೧೯೭೭ರಲ್ಲಿ ಮಾನ್ಯ ಅರ್ಥಸಚಿವರು ಘೋಷಿಸಿದ ನೀತಿಗೆ ಅನುಗುಣವಾಗಿ ಸರ್ಕಾರದ ಮೇಲೆ ಒಂದು ಹೊಣೆಗಾರಿಕೆ ಇದೆ. ರಾಜ್ಯ ಸರ್ಕಾರೀ ನೌಕರರ ಬೇಡಿಕೆಗಳ ಪೈಕಿ ಬಹಳ ಮುಖ್ಯವಾದುದು ಏಂದರೆ ಎರಡನೇ ಕಂತಿನ ತುಟ್ಟಿಭತ್ಯವನ್ನು ಮಂಜೂರು ಮಾಡಬೇಕು ಎಂಬುದು. ಆದ್ದರಿಂದ ಅದನ್ನು ಆದಷ್ಟು ಜಾಗ್ರತೆ ಸರ್ಕಾರದವರು ಮಂಜೂರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಸರ್ಕಾರದವರೇ ನೇಮಕ ಮಾಡಿದ್ದಂಥ ನಾರಾಯಣ ಪ್ರೈವೇತನ ಆಯೋಗದವರು ಏನೇನು ಶಿಫಾರಸುಗಳನ್ನು ಮಾಡಿದ್ದಾರೋ ಅದರಲ್ಲಿ ಅನೇಕ ಶಿಫಾರಸುಗಳನ್ನು ಮೂರು ವರ್ಷವಾದರೂ ಕೂಡ ಕಾರ್ಯಗತ ಮಾಡದಿರುವುದರಿಂದ ಅದನ್ನು ಮಾಡಿ ಎಂಬುದು ಅವರ ಇನ್ನೊಂದು ಮುಖ್ಯವಾದ ಬೇಡಿಕೆ. ಉದಾಹರಣೆಗೆ ನಾಲ್ಕನೇ ದರ್ಜೆ ನೌಕರರೇನಿದ್ದಾರೆ ಇವರಿಗೆ.....

ಅಧ್ಯಕ್ಷರು.—ಇದು ಗಮನ ಸೆಳೆಯುವ ಸೂಚನೆ. ದೀರ್ಘ ಭಾಷಣ ಮಾಡಿದರೆ ಹೇಗೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಆನಂದರಾಯರಿಗೆ ಗೊತ್ತಿರುವುದಕ್ಕಿಂತ ಹೆಚ್ಚಾಗಿ ಮಾನ್ಯ ಮುಖ್ಯ ಮಂತ್ರಿಗಳಿಗೆ ಈ ವಿಷಯಗಳು ಗೊತ್ತಿದೆ. ಎನ್.ಜಿ.ಓ. ಸಂಘದ ಅಧ್ಯಕ್ಷರು ಮುಖ್ಯ ಮಂತ್ರಿಗಳ ಸಲಹೆ ಪ್ರಕಾರವೇ ಚಳುವಳಿ ಮಾಡುತ್ತಾರೆ, ಇವರ ಸಲಹೆ ಪ್ರಕಾರವೇ ಚಳುವಳಿ ನಿಲ್ಲಿಸುತ್ತಾರೆ.

ಶ್ರೀ ಮಳ್ಳೂರು ಆನಂದರಾವ್.—ಅವರವರ ಸಂಬಂಧ ಹೇಗಿದೆಯೋ ನಮಗೆ ಗೊತ್ತಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಒಂದು ಸಲಹೆ ಮಾಡುತ್ತೇನೆ. ಸರ್ಕಾರೀ ನೌಕರರಿಗೆ ಏನೇನು ಸೌಲಭ್ಯಗಳನ್ನು ಕೊಡಬೇಕೋ ಅದನ್ನೆಲ್ಲಾ ಕೊಡಿ. ಅದಕ್ಕೆ ನಮ್ಮ ಅಭ್ಯಂತರ ಇಲ್ಲ. ಆದರೆ ಅವರು ಕಛೇರಿಯಲ್ಲಿ ಸರಿಯಾಗಿ ಕುಳಿತು ವಿರ್ದಿಷ್ಟವಾಗಿ ಜನ ಸಾಮಾನ್ಯರ ಕೆಲಸವನ್ನು ಲಂಚ ತೆಗೆದು ಕೊಳ್ಳದೇ ಕಟ್ಟುನಿಟ್ಟಾಗಿ ಮಾಡತಕ್ಕ ಒಂದು ಶಿಸ್ತನ್ನು ಬೆಳೆಸಿಕೊಳ್ಳುವುದಕ್ಕೆ ಮುಖ್ಯ ಮಂತ್ರಿಗಳು ಹೇಳಬೇಕು.

ಶ್ರೀ ಡಿ. ದೇವರಾಜ ಅರಸ್.—ನಾವೂ ಹೇಳುತ್ತೇವೆ, ನೀವೂ ಹೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸರ್ಕಾರೀ ನೌಕರರಿಗೆ ಕೊಡತಕ್ಕ ಸೌಕರ್ಯಗಳ ವಿಷಯದಲ್ಲಿ ನಮ್ಮ ಅಭ್ಯಂತರವೇನೂ ಇಲ್ಲ. ಒಬ್ಬ ಬಡ ರೈತ ಸರ್ಕಾರೀ ಕಛೇರಿಗೆ ಹೋದರೆ ಅವನ ಕೆಲಸ ಮಾಡಿಸಿ ಕೊಳ್ಳಲು ಬಹಳಷ್ಟು ತೊಂದರೆಪಡುತ್ತಿದ್ದಾನೆ ಎಂಬ ಮಾತನ್ನು ಮನನೊಂದು ನಾನು ಹೇಳಬೇಕಾಗಿದೆ. ತಮ್ಮ ಕರ್ತವ್ಯವನ್ನು ಸರಿಯಾಗಿ ಜನ ಸಾಮಾನ್ಯ ಹಿತದೃಷ್ಟಿಯಿಂದ ನಿರ್ದಿಷ್ಟವಾಗಿ ಮಾಡತಕ್ಕಂಥ ಒಂದು ಶಿಸ್ತನ್ನು ಪಾಲನೆ ಮಾಡುವುದಕ್ಕೆ ಸರ್ಕಾರೀ ಕರ್ಮಚಾರಿಗಳಿಗೆ ಮುಖ್ಯ ಮಂತ್ರಿಗಳು ಆದೇಶ ಕೊಡಬೇಕು.

ಶ್ರೀ ಡಿ. ದೇವರಾಜ ಅರಸ್.—ನಾವು ಹೇಳುತ್ತೇವೆ, ನೀವೂ ಅಲ್ಲಿ ಹೋಗಿ ಹೇಳಿ.

ಶ್ರೀ ಮಳ್ಳೂರು ಆನಂದರಾವ್.—ಸರ್ಕಾರದವರೇ ನೇಮಕ ಮಾಡಿದ್ದಂಥ ವೇತನ ಆಯೋಗದ ಶಿಫಾರಸುಗಳನ್ನು.....

ಅಧ್ಯಕ್ಷರು.—ಗಮನ ಸೆಳೆಯುವ ಸೂಚನೆ ಎಂದರೆ ಈ ರೀತಿ ಭಾಷಣ ಮಾಡುವುದಕ್ಕೆ ಅವಕಾಶ ಇಲ್ಲ.

ಶ್ರೀ ಮಳ್ಳೂರು ಆನಂದರಾವ್.—ನಮಗೆ ಭಾಷಣ ಮಾಡುವ ಚಟ ಏನೂ ಇಲ್ಲ. ಏನು ಹೇಳ ಬೇಕೋ ಅದನ್ನು ಹೇಳುತ್ತಿದ್ದೇನೆ. ಸರ್ಕಾರೀ ನೌಕರರು ರಸ್ತೆಗಿಳಿದು ಘೋಷಣೆಗಳನ್ನು ಕೂಗಿ, ಕುಳಿತು ಸತ್ಯಾಗ್ರಹ ಮಾಡುತ್ತಿದ್ದಾರೆ. ಈ ರೀತಿ ಮಾಡುವುದರಿಂದ ನಮಗೂ ಶೋಭೆ ತರುವುದಿಲ್ಲ, ಸರ್ಕಾರಕ್ಕೂ ಶೋಭೆ ತರುವುದಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಅದು ನನಗೆ ಗೊತ್ತಿದೆ.

ಶ್ರೀ ಮಳ್ಳೂರು ಆನಂದರಾವ್.—ಗೊತ್ತಿದ್ದರೂ ಯಾತಕ್ಕೆ ಜಳುಪಳಿ ಮಾಡುವುದಕ್ಕೆ ಬಿಟ್ಟಿದ್ದೀರಿ ?

ಶ್ರೀ ಡಿ. ದೇವರಾಜ ಅರಸ್.—ನೀವು ಹೋಗಿ ಏನೋ ಕಿವಿ ಊದಿರಬೇಕು.

ಶ್ರೀ ಮಳ್ಳೂರು ಆನಂದರಾವ್.—ನಾವು ಯಾತಕ್ಕೆ ಆ ಕೆಲಸ ಮಾಡೋಣ. ಸರ್ಕಾರೀ ನೌಕರರು ಈ ರೀತಿ ರಸ್ತೆಗಿಳಿದು ಘೋಷಣೆಗಳನ್ನು ಕೂಗುವುದು ಉಚಿತವಲ್ಲ. ಇವರು ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲೂ ಸಂಪು ಹೂಡುವುದಕ್ಕೆ ಹೊರಟಿದ್ದಾರೆ. ಅದಕ್ಕೆ ಅವಕಾಶ ಕೊಡದೇ ಅವರಿಗೆ ಏನು ಕೊಡಬೇಕೋ ಅದನ್ನು ಕೊಟ್ಟುಬಿಡಿ.

ಶ್ರೀ ಡಿ. ದೇವರಾಜ ಅರಸ್.—ಸ್ವಾಮಿ, ನಾನು ಈಗಾಗಲೇ ಹೇಳಿದ್ದೇನೆ ; ಹೆಚ್ಚಿಗೆ ಏನನ್ನೇನೂ ಹೇಳಬೇಕಾಗಿಲ್ಲ. ನಾವು ಅವರ ಬೇಡಿಕೆಗೆ ಒಪ್ಪಿಲ್ಲ ಎಂಬುದು ಸ್ಪಷ್ಟವಾಗಿದೆ. ನಾರಾಯಣ ಪೈ ವೇತನ ಆಯೋಗ ಮಾಡಿದಂಥ ಅನೇಕ ಶಿಫಾರಸುಗಳನ್ನು ನಾವು ಒಪ್ಪಿಕೊಂಡಿದ್ದೇವೆ. ನಾವು ಒಳ ಹೊಕ್ಕು ನೋಡುವುದಾದರೆ ನಮ್ಮ ವೇತನ ಶ್ರೇಣಿ ಏನಿದೆ ಇದು ಇಡೀ ಭಾರತ ದೇಶದಲ್ಲಿ ಇರುವಂಥ ವೇತನ ಶ್ರೇಣಿಗಿಂತ ಉತ್ತಮ ಮಟ್ಟದ್ದಾಗಿದೆ. ಕೇಂದ್ರ ಸರ್ಕಾರದ ವೇತನ ಶ್ರೇಣಿಗಿಂತ ಉತ್ತಮ ವಾದುದು ನಮ್ಮ ಸರ್ಕಾರದ್ದಾಗಿದೆ. ಒಂದು ವಿಷಯ ಏನೆಂದರೆ ಆದರಲ್ಲಿ ಪ್ರಾರಂಭದಲ್ಲಿ ಇರತಕ್ಕ ಕೆಲವು ವೇತನ ಶ್ರೇಣಿಗಳು ಸ್ವಲ್ಪ ಕಡಿಮೆ ಇದೆ ಎಂಬ ವಾದ ಇದೆ. ಈ ಬಗ್ಗೆ ಎನ್.ಜಿ.ಓ. ಅಸೋಸಿಯೇಷನ್‌ನವರು ಚರ್ಚೆ ಮಾಡಿದ್ದಾರೆ. As they go up in the service ಸಂಬಳಗಳೂ ಜಾಸ್ತಿಯಾಗುತ್ತಾ ಹೋಗುತ್ತದೆ. ಅಲ್ಲದೇ ಬೇರೆ ರಾಜ್ಯದಲ್ಲಿರತಕ್ಕ ಎಲ್ಲಾ ಪೇ ಸ್ಕೇಲ್‌ಗಿಂತ ನಮ್ಮ ಪೇ ಸ್ಕೇಲ್ ಚೆನ್ನಾಗಿದೆ. ಗ್ರಾಚುಯಿಟಿ, ಪೆನ್‌ಷನ್ ಸ್ಕೀಂ ಎಲ್ಲಾ ಚೆನ್ನಾಗಿ ಕೊಟ್ಟಿದ್ದೇವೆ. ಇದಲ್ಲದೆ ಮತ್ತೆ ಮೊನ್ನೆ ತಾನೆ ಇನ್ನೊಂದು ಕಂತು ತುಟ್ಟಿಭತ್ಯವನ್ನು ಕೊಡುವುದಾಗಿ ಘೋಷಣೆ ಮಾಡಿದ್ದೇವೆ. ಇದಕ್ಕಿಂತ ಹೆಚ್ಚಿಗೆ ನಾನು ಏನು ಹೇಳಬೇಕಾದ ಅಗತ್ಯವೂ ಇಲ್ಲ, ಅವಶ್ಯಕತೆಯೂ ಇಲ್ಲ. ಇಷ್ಟೆಲ್ಲಾ ಆದರೂ ಅವರು ಸತ್ಯಾಗ್ರಹ ಮಾಡುತ್ತಿದ್ದಾರೆ ಎಂದರೆ ಅದು ಸರಿಯಲ್ಲ. ಹೀಗೆಲ್ಲಾ ಕುಳಿತುಕೊಳ್ಳ ಬೇಡಿ, ಇಷ್ಟೆಲ್ಲಾ ಮಾಡಿದ್ದಾರೆ, ಸುಮ್ಮನೆ ಬಂದು ಕೆಲಸ ಮಾಡಿ ಎಂದು ತಾವು ದಯಮಾಡಿ ಹೋಗಿ ಹೇಳಿ. ನಿಮ್ಮ ಮಾತು ಕೇಳಬಹುದು ಎಂಬ ಭಾವನೆ ನನಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತಹ ವಿಚಾರವನ್ನು ನಾವು ಗಮನಿಸಬೇಕಾಗಿದೆ ಇನ್ನೊಂದು ವಿಷಯ ಏನೆಂದರೆ ಆರ್ಥಿಕ ಪರಿಸ್ಥಿತಿ ಸುಧಾರಿಸಿದ ಕೂಡಲೇ ಎಲ್ಲವನ್ನೂ ಕೊಟ್ಟುಕೊಂಡು ಹೋಗಬೇಕು ಎಂದು ಹೇಳಿದರೆ ಸರಿಯಲ್ಲ. ಅನೇಕ ಬೇರೆ ಖರ್ಚುಗಳಿರುತ್ತವೆ. ಹಳ್ಳಿಯ ಜನರ ಕಡೆ ನೋಡಬೇಕಾಗುತ್ತದೆ ; ನೀರಾವರಿ ಕಡೆ ಗಮನ ಕೊಡಬೇಕಾಗುತ್ತದೆ. ಇನ್ನೂ ಮುಂತಾದ ಅಭಿವೃದ್ಧಿ ಕೆಲಸಗಳಿಗೇ ಹಣ ಸಾಲುವುದಿಲ್ಲ ಎಂದು ಹೇಳುವಾಗ ಸರ್ಕಾರೀ ನೌಕರರ ವಿಷಯವನ್ನೇ ದೊಡ್ಡದನ್ನಾಗಿ ಮಾಡಿಕೊಂಡು ಹೋಗುವುದು ಸರಿಯಲ್ಲ. ಇಷ್ಟಿದ್ದರೂ ಕೂಡ ಬಜೆಟ್ ಅಧಿವೇಶನ ಆದಮೇಲೆ ಬಾಕಿ ವಿಷಯಗಳ ಬಗ್ಗೆ ಚರ್ಚೆ ಮಾಡೋಣ ಎಂದು ಹೇಳಿದ್ದೇವೆ. ನಾನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಸರ್ಕಾರೀ ನೌಕರರ ಸಂಘದವರು ಸತ್ಯಾಗ್ರಹವನ್ನೇನು ಮಾಡುತ್ತಿದ್ದಾರೆ ಅದು ಸರಿಯಲ್ಲ, ಅದನ್ನು ಮಾಡಬಾರದು ಎಂದು. ಇದಕ್ಕಿಂತ ಹೆಚ್ಚಿಗೆ ನಾನೇನೂ ಹೇಳುವುದಿಲ್ಲ.

ಶ್ರೀ ಮಳ್ಳೂರು ಆನಂದರಾವ್.—ಆಯವ್ಯಯ ಅಧಿವೇಶನ ಆದನಂತರ ಎಂದು ಹೇಳಿದ್ದೀರಿ. ನಾಳೆ ಯುಗಾದಿಗೆ ಮುಂಚೆ ಏನಾದರೂ.....

ಶ್ರೀ ಡಿ. ದೇವರಾಜ ಅರಸ್.—ಹೇಳಿದ್ದೇವೆ. ಇನ್ನು ಎರಡು ತಿಂಗಳಾದರೂ ಆಗಬಹುದು.

ಶ್ರೀ ಮಳ್ಳೂರು ಆನಂದರಾವ್.—ಯುಗಾದಿ ಉಡುಗೋರೆಯಾಗಿ ಅವರಿಗೆ ಕೊಡಬೇಕಾದ್ದನ್ನು ಕೊಟ್ಟುಬಿಡಿ.